ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ನಾವು ಸಂಗ್ರಹಿಸಿದಂಥ ಮಾಹಿತಿ ಪ್ರಕಾರ ಏನಿದೆಯೆಂದು ಹೇಳಿದರೆ, ಅದು ನಿಜವಾಗಿ ಸಾಮಾನ್ಯ ಸಿಬ್ಬಂದಿ ಮಾಡಬೇಕಾದ ಕೆಲಸ. ಏರ್‌ಪೋರ್ಟ್‌ಗೆ ಹೋಗುವುವಾಗ ಅವರು ಛೇರ್ಮನ್ ಆಗಿ ಡಿಫೇಕ್ಟ್‌ನ್ನು ಪರಿಶೀಲಿಸಿ ಆ ಬಗ್ಗೆ ಅದನ್ನು ಸರಿಪಡಿಸತಕ್ಕಂಥ ಪ್ರಯತ್ನ ಮಾಡಿದ್ದಾರೆ. ಅದನ್ನು ನೋಡಿ ಸರಿ ಮಾಡತಕ್ಕದ್ದೇ ಸರ್ವಾಧಿಕಾರ ಪ್ರಯತ್ನ. ಎನ್ನುವುದಾದರೆ ಅದು ಪ್ರತ್ಯೇಕ.

ಶ್ರೀ ಹೆಚ್. ವಿಕಾಂತಯ್ಯ : ಸಚಿವರನ್ನು ನಾನು ಬಹಳ ವಿನಯದಿಂದ ಕೇಳುತ್ತೇನೆ. ಲಾಗ್ ಬುಕ್‌ನಲ್ಲಿ ತಾವು ನೋಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿ ನಮಗೆ ಬಂದಂಥ ಮಾಹಿತಿ ಪ್ರಕಾರ ನಾವು ಹೇಳಿದ್ದೇವೆ. ನಮ್ಮ ಮಾಹಿತಿ ಸರಿಯಲ್ಲವೆಂದು ತಾವು ಹೇಳುತ್ತೀರಿ. ಆದರೆ ನಮಗೆ ಅಂದರೆ ಸರ್ಕಾರಕ್ಕೆ ಬಂದ ಮಾಹಿತಿ ಪ್ರಕಾರ ಅವರು ಆ ಡಿಫೇಕ್ಟ್‌ನ್ನು ಅಬ್ಸರ್ವ್ ಮಾಡಿ ಅದನ್ನು ಸರಿಪಡಿಸಲಿಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಂಡರು. ಕಾರ್ಯಕ್ರಮ ತೆಗೆದುಕೊಂಡ ಮೇಲೆ ಅದು ಸರಿಹೋಯಿತು. ತಾವು ಲಾಗ್‌ಬುಕ್‌ನ್ನು ನೋಡಿ. ಅದನ್ನು ತಿದ್ದುಪಡಿ ಮಾಡಿದ್ದಾರೆಂದು ಒಂದು ಆಪಾದನೆ ಮಾಡಿದ್ದೀರಿ. ಆ ಲಾಗ್ ಬುಕ್ಕಿನ ಬಗ್ಗೆ ನಾವು ವಿಚಾರ ಮಾಡೋಣ.

ವಿಷಯ(ii) : ಸೊರಬ ತಾಲ್ಲೂಕಿನ ಮರೂರು ಗ್ರಾಮದಲ್ಲಿ ಸಾಗುವಾನಿ ನಾಟಾಗಳನ್ನು ಅರಣ್ಯದಿಂದ ಅಕ್ರಮವಾಗಿ ಕದಿದು ಸಾಗಿಸಿರುವುದು

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾವು ನಿಲುವಳಿ ಸೂಚನೆ ಕಳುಹಿಸಿದಾಗ ಸೊರಬ ತಾಲ್ಲೂಕಿನಲ್ಲಿ ಕಳ್ಳಸಾಗಾಣಿಕೆ ಆಗಿರುವ ಬಗ್ಗೆ ರಿಪ್ಲೈ ಮಾಡುತ್ತೇವೆಂದು ಹೇಳಿದ್ದರು. ಸೊರಬ ತಾಲ್ಲೂಕಿನಲ್ಲಿ ಕೆಲವು ಮಂಡಲ ಪಂಚಾಯ್ತಿ ಸದಸ್ಯರು ಸೇರಿಕೊಂಡು ಕಾಡಿನಲ್ಲಿ ಮರ ಕಡಿಯುವಂಥ ಸಂದರ್ಭದಲ್ಲಿ ಪತ್ರಕರ್ತರು ಹೋಗಿ ಅವರನ್ನು ಹಿಡಿದು ಕಂಪ್ಲೆಂಟ್ ಕೊಟ್ಟ. ಅವರನ್ನೇ ಅಪರಾಧಿಗಳನ್ನಾಗಿ ಮಾಡಿ ಜೈಲಿಗೆ ಕಳುಹಿಸುವ ಕೆಲಸ ನಡೆಯುತ್ತಿದೆ. ಈ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಈ.ಟಿ. ಶಂಬುನಾಥ್ (ಅರಣ್ಯ ಇಲಾಖೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಸೊರಬ ತಾಲೂಕಿನ ಮರೂರು ಗ್ರಾಮದಲ್ಲಿ ಬಸವಣ್ಣನ ದೇವಸ್ಥಾನವಿದ್ದು, ಈ ದೇವಸ್ಥಾನದ ಹಿಂದೆ ಇದ್ದ ಮೂರು ಸಾಗುವಾನಿ ಮರಗಳನ್ನು ಅಕ್ರಮವಾಗಿ ಕಡಿತಲೆ ಮಾಡಲಾಗಿದೆ. ಕಡಿತಲೆಯಾದ 3 ಮರಗಳಲ್ಲಿ, 2 ಮರಗಳು ಕಾಡು ಪ್ರದೇಶದಲ್ಲಿ ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುತ್ತಿದ್ದು, ಉಳಿದ 1 ಮರ ಮರೂರು ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆ. ಕಡಿತಲೆ ಬಗ್ಗೆ ಸಾಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಸಾಗರದ ಮನೋಭೂಮಿ ಎಂಬ ಪತ್ರಿಕೆಯ ಸುದ್ದಿಗಾರರಾದ ಶ್ರೀ ಶೆಟ್ಟಿಯವರು ದೂರವಾಣಿ ಮುಖಾಂತರ ತಿಳಿಸಿದ ವರ್ತಮಾನದ ಮೇಲೆಗೆ ದಿನಾಂಕ 3-9-1991 ರಂದು ಸ್ಥಳಕ್ಕೆ ಭೇಟಿ ನೀಡಿದಾಗ ಕಡಿತಲೆಯಾದ ಮರಗಳು ಸ್ಥಳದಲ್ಲೇ ಇರುವುದು ಕಂಡುಬಂದಿದ್ದು, ಇವುಗಳನ್ನು ಅಲ್ಲಿಂದ ಸಾಗಿರಿ ಸೊರಬ ವಲಯ ಅರಣ್ಯಾಧಿಕಾರಿಯವರ ಕಛೇರಿಯ ಅವರಣದಲ್ಲಿ ಇಡಲಾಗಿದೆ. ಈ ಪ್ರಕರಣದಲ್ಲಿ ಅನುಮಾನವಿದ್ದ ಶ್ರೀ ಭಂಡಾರಿ ತಿಮ್ಮಪ್ಪ ಬಿನ್ ಕರಿಯಪ್ಪ ಎಂಬುವರ ವಿರುದ್ಧ ಕೇಸು ದಾಖಲು ಮಾಡಿಕೊಂಡು ವಿಚಾರಣೆ ನಡೆಸಲಾಗುತ್ತಿದೆ.

ಇಷ್ಟಲ್ಲದೆ ಬೇರೆ ಯಾವುದೇ ಮಾಹಿತಿಯೂ ಅರಣ್ಯ ಇಲಾಖೆಗೆ ಬಂದಿರುವುದಿಲ್ಲ. ಹಾಗೂ ಅರಣ್ಯ ಇಲಾಖೆಯು ಯಾವುದೇ ಪತ್ರಕರ್ತರ ವಿರುದ್ಧ ಕೇಸು ದಾಖಲು ಮಾಡಿರುವುದಿಲ್ಲ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಯಾರು ಪತ್ರಕರ್ತರು ಇದನ್ನು ಬಯಲು ಮಾಡಿದರೋ ಅವರನ್ನೇ ಅರೆಸ್ಟ್‌ಮಾಡಿ ಅವರ ಮೇಲೆ ಆರೋಪವನ್ನು ಹೊರೆಸಿದ್ದಾರೆ. ಇಡೀ ಶಿವಮೊಗ್ಗ ಜಿಲ್ಲೆಯ ಪತ್ರಕರ್ತರು ಇದನ್ನು ಪ್ರತಿಭಟನೆ ಮಾಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇರುವಂಥ ಕ್ಷೇತ್ರ ಅದು. ಇಂಥ ಒಂದು ಕ್ಷೇತ್ರದಲ್ಲಿ ಈ ರೀತಿ ಪತ್ರಕರ್ತರ ಮೇಲೆ ಯಾರು ಈ ಕಳ್ಳಸಾಗಾಣಿಕೆಯನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದರೋ, ಆ ಪತ್ರಕರ್ತರ ಮೇಲೆಯೇ ಕೇಸ್ ಹಾಕಿ ಅಪರಾಧ ಹೊರಿಸುವಂಥ ಕೆಲಸ ಅಕ್ಷಮ್ಯ ಅಪರಾಧ. ನೀವು ಅಂದರೆ, ಅರಣ್ಯ ಇಲಾಖೆಯವರು ಅವರನ್ನು ಅರೆಸ್ಟ್ ಮಾಡಿದ್ದೀರಿ ಎಂದು ಹೇಳುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಇದ್ದಾರೆ. ಅವರು ಸರಿಯಾದ ಮಾಹಿತಿಯನ್ನು ತರಿಸಿಕೊಂಡು ಹೇಳಬೇಕು. ಇದರ ಬಗ್ಗೆ ಶಿವಮೊಗ್ಗ ಜಿಲ್ಲೆಯಲ್ಲಿ ಪತ್ರಕರ್ತರು ಒಂದು ದೊಡ್ಡ ಹೋರಾಟ ಮಾಡುತ್ತಿದ್ದಾರೆ. ಇದು ಪತ್ರಕರ್ತರಿಗೆ ಅವಹೇಳನವಾಗುತ್ತದೆ. ಅವರಿಗೆ ಅಪಮಾನವಾಗುತ್ತದೆ. ಕಳ್ಳತನ ಮಾಡುತ್ತಿದ್ದವರನ್ನು ಪತ್ತೆ ಹೆಚ್ಚಿದವರಿಗೆ ಸನ್ಮಾನ ಮಾಡಬೇಕಾಗುವ ಬದಲು ಜೈಲಿಗೆ ಕಳುಹಿಸುವಂಥ ಕೇಸ್ ಹಾಕುವಂಥ ಪ್ರಯತ್ನ ಇದು ಅಕ್ಷಮ್ಯ ಅಪರಾಧ. ನಾನು ದೂರವಾಣಿ ಮುಖಾಂತರ ಈ ಬಗ್ಗೆ ಕನ್‌ಫರ್ಮ್ ಮಾಡಿಕೊಂಡಿದ್ದೇನೆ. ಅವರ ಮೇಲೆ ಕೇಸ್ ಹಾಕಿರುವುದು ನಿಜ. ಸೊರಬದ ಇಬ್ಬರು ಪತ್ರಕರ್ತರ ಮೇಲೆ ಕೇಸ್ ಹಾಕಿರುವಂಥ ಸಂದರ್ಭದಲ್ಲಿ ಈಗ ಸದನದಲ್ಲಿರುವ ಸಭಾನಾಯಕು ದಯಮಾಡಿ ಅಲ್ಲಿ ಏನು ಘಟನೆ ನಡೆದಿದೆಯೆಂದು ತಿಳಿದು ಆ ಪತ್ರಕರ್ತರ ಮೇಲೆ ಹಾಕಿರುವ ಕೇಸ್‌ನ್ನು ವಿತ್‌ಡ್ರಾ ಮಾಡಿಕೊಂಡು ಅದರ ಬಗ್ಗೆ ಹೇಳಿಕೆ ಕೊಡಬೇಕು. ಅದು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು. ಆದ್ದರಿಂದ ತಾವು ಹೇಳಬೇಕು. ಅರಣ್ಯ ಲೂಟಿ ಆಗುತ್ತಿರುವಂಥ ಪ್ರಯತ್ನವನ್ನು ಇವತ್ತಿನ ದಿವಸ ನಾವು ನೀವೆಲ್ಲರೂ ಕೂಡಿ ಮಾಡುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಪತ್ರಕರ್ತರ ಮೇಲೆ ಈ ರೀತಿ ಆರೋಪ ಹೊರಿಸುವಂಥಾದ್ದು ಸರಿಯಲ್ಲ. ಹೀಗೆ ಮಾಡಿದರೆ ನಾಳೆ ದಿವಸ ಇಂಥ ವಿಷಯಗಳನ್ನು ಪತ್ರಕರ್ತರು ಬಹಿರಂಗವಾಗಿ ಬರೆಯುವುದಕ್ಕೆ ಹೋಗುವುದಿಲ್ಲ. ಕಳ್ಳತನ ಮಾಡುವಾಗ ಫೋಟೋ ತೆಗೆಯುವುದಕ್ಕೆ ಹೋದಂಥವರ ಮೇಲೆನೇ ಎಸ್.ಪಿ.ಯವರು ನೇರವಾಗಿ ಅದಕ್ಕೂ ಮುಂಚೆ ಸಬ್ ಇನ್‌ಸ್‌ಪೆಕ್ಟರ್‌ನ್ನು ಕಳುಹಿಸಿಕೊಟ್ಟು ಅವರ ಮೇಲೆ ಕೇಸ್ ಹಾಕುವ ಪ್ರಕರಣ ಇದು ನಡೆದಿದೆ. ಮಾನ್ಯ ಸಭಾನಾಯಕರು ದಯಮಾಡಿ ನಡೆದಿರುವಂಥ ಸತ್ಯ ಘಟನೆಯನ್ನು ತಿಳಿಸಬೇಕೆಂದು ತಮ್ಮ ಮೂಲಕ ಸಭಾನಾಯಕರಲ್ಲಿ ನಾನು ವಿನಂತಿ ಮಾಡುತ್ತೇನೆ.

ಶ್ರೀ ಇ.ಟಿ. ಶಂಭುನಾಥ್ : ಇದಕ್ಕಿಂತ ಹೆಚ್ಚಿನ ಮಾಹಿತಿ ನನ್ನಲ್ಲಿ ಇಲ್ಲ. ಮಾನ್ಯ ಗೃಹ ಸಚಿವರಿಗೆ ಈ ವಿಷಯ ತಿಳಿಸಿ. ಅಲ್ಲಿಂದ ವಿವರ ತರಿಸಿ ಸಭೆಗೆ ವರದಿ ಒಪ್ಪಿಸಲು ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ನಮ್ಮ ರಕ್ಷಣೆಗೆ ಬರಬೇಕು. ಇಲ್ಲಿ ಪ್ರಶ್ನೆ ಇಷ್ಟೆ. ಇವತ್ತು ನಾವು ಸದನದ ಕಾರ್ಯಕಲಾಪಗಳನ್ನು ಮುಗಿಸಿ ಹೋಗುತ್ತಿದ್ದೇವೆ. ನಿನ್ನೆ ನಿಲುವಳಿ ಸೂಚನೆಯ ಮೂಲಕ ಇದನ್ನು ಪ್ರಸ್ತಾಪ ಮಾಡಿ ಆಗಿತ್ತು. ಇಡೀ ಒಂದು ಪತ್ರಿಕಾ ಸಮೂಹಕ್ಕೆ ಮಾಡಿರುವಂತಹ

ಅಪಮಾನ ಇದು. ಇಂತಹ ಒಂದು ಸಂದರ್ಭದಲ್ಲಿ ಗೃಹ ಸಚಿವರ ಇಲಾಖೆಗೆ ಸಂಬಂಧಪಟ್ಟವರು ಇಲ್ಲದೇ ಇದ್ದರೆ ಬೇರೆ ಯಾರಾದರೂ ಸಚಿವರು ಅವರ ಪರವಾಗಿ ಹೇಳಿಕೆಯನ್ನು ಕೊಡಬೇಕಾಗುತ್ತದೆ. ಸತ್ಯ ಸಂಗತಿಯನ್ನು ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ. ಇದು ಕೇವಲ ಶಿವಮೊಗ್ಗ ಜಿಲ್ಲೆಯಲ್ಲಿ ಬಂದಿರತಕ್ಕ ಪ್ರಶ್ನೆ ಅಲ್ಲ. ಇಡೀ ರಾಜ್ಯದ ಪತ್ರಕರ್ತರಿಗೆ ಅಪಮಾನ ಮಾಡಿರುವಂತಹ ಸಂಗತಿ ಎಂದು ನಾನು ಭಾವಿಸಿದ್ದೇನೆ. ಇಲ್ಲದೇ ಇದ್ದರೆ ಪತ್ರಿಕಾ ಕರ್ತರು ನಿರ್ಭೀತಿಯಿಂದ ಕೆಲಸ ಮಾಡುವಂತಹದು ನಿಮ್ಮ ಸರ್ಕಾರದಲ್ಲಿ ಆಗದೇ ಇರುವಂತಹ ಒಂದು ವಿಚಿತ್ರವಾದ ಪರಿಸ್ಥಿತಿ ಒದಗಿ ಬರಬಹುದು. ಅದಕ್ಕೆ ಇನ್‌ಫರ್ಮೇಷನ್ ತರಿಸಿಕೊಂಡು ಇನ್ನು ಅರ್ಧ ಗಂಟೆಯೊಳಗಾಗಿ, ಈ ಸದನ ಮುಗಿಯುವದರೊಳಗಾಗಿ ಸತ್ಯ ಸಂಗತಿ ಏನು ಆಗಿದೆ. ಅದರ ಮೇಲೆ ಕೇಸ್ ಹಾಕಿರುವಂತಹದು ನಿಜವೇ ಅಲ್ಲವೇ, ಈ ಪ್ರಕರಣ ಏಕೆ ಆಯಿತು, ಇದರ ಬಗ್ಗೆ ದಯಮಾಡಿ ಸದನದಲ್ಲಿ ಉತ್ತರ ಕೊಡುವಂತಹ ಅಗತ್ಯ ಇದೆ.

ಅಧ್ಯಕ್ಷರು : ತಿಳಿಸುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಕಾಡನ್ನು ಕಡಿದಂತಹ ಮಂಡಲ ಪಂಚಾಯಿತಿ ಸದಸ್ಯರ ಮೇಲೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಕೇಸ್ ಹಾಕಿದ್ದಾರೆ.

ಅಧ್ಯಕ್ಷರು : ತಿಳಿಸುತ್ತಾರೆ ಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಕಾಡನ್ನು ಕಡಿದವರ ಮೇಲೆ ಕೇಸ್ ಹಾಕಿದ್ದಾರೆ. ಆದರೇ ಪೋಲೀಸ್ ಡಿಪಾರ್ಟ್‌ಮೆಂಟಿನವರು ಪತ್ರಕರ್ತರ ಮೇಲೆ ಕೇಸ್ ಹಾಕಿದ್ದಾರೆ. ಇಷ್ಟೊಂದು ವ್ಯತ್ಯಾಸ ನೋಡಿ. ಕಾಡನ್ನು ಕಡಿದಂತಹ ಮಂಡಲ್ ಪಂಚಾಯಿತಿ ಸದಸ್ಯ, ತಿಮ್ಮಪ್ಪ ಎಂದು ಹೇಳಿ, ಅವರ ಮೇಲೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮರ ಕಡಿದಿರುವುದು ಹೌದು ಎಂದು ತಿಳಿದುಕೊಂಡು ಮರ ಕಡಿದವರ ಮೇಲೆ ಕೇಸ್ ಹಾಕಿದ್ದಾರೆ. ಫಸ್ಟ್ ಇನ್‌ಫರ್ಮೇಷನ್ ರಿಪೋರ್ಟ್ ನನ್ನ ಹತ್ತಿರ ಕೂಡ ಇದೆ. ಅದು ಆದ ನಂತರ ಪತ್ರಕರ್ತರು ಮತ್ತೆ ಹೋಗಿ ವೆರಿಫೈ ಮಾಡುವಂತಹ ಸಂದರ್ಭದಲ್ಲಿ ಅವರ ಮೇಲೆ ಸುಳ್ಳು ಅಪಾದನೆ ಹಾಕಿ, ಕಂಪ್ಲೆಂಟ್ ಕೊಡಿಸಿ, ಪೋಲೀಸ್‌ನವರು ಪ್ರೆಷರ್ ಹಾಕಿ ಅವರ ಮೇಲೆ ಕೇಸ್ ಹಾಕಿಸಿದ್ದಾರೆ.

ಅಧ್ಯಕ್ಷರು : ಆ ಬಗ್ಗೆ ನಿಮಗೆ ಫೋನ್ ಮಾಡಿದ್ದಾರೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರಲ್ಲಿ ಇಬ್ಬರು ಪತ್ರಕರ್ತರು. ಇಬ್ಬರು ಸಮಾಜ ಸೇವಕರು. ಬೆಂಗಳೂರಿನಿಂದ ಫೋನ್ ಬಂದಿದೆ ಎಂದು ಅಲ್ಲೆಲ್ಲಾ ಸುದ್ದಿ ಹರಡಿದೆ. ಅದಕ್ಕೋಸ್ಕರವಾಗಿ ನಾನು ಹೇಳುತ್ತಿರುವುದು ಇದರ ಬಗ್ಗೆ ತನಿಖೆ ಮಾಡಲಿ. ಸರಿಯಾದ ರಿಪೋರ್ಟ್ ಆದರೂ ಕೊಡಲಿ. ಈ ರೀತಿ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಆಗಿಬಿಟ್ಟರೆ ಇಡೀ ರಾಜ್ಯದ ಗತಿ ಏನು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಸುಳ್ಳು ಕೇಸ್ ಹಾಕಿದ್ದಾರೆ

ಶ್ರೀ ಕೆ.ಎಸ್. ಈಶ್ವರಪ್ಪ : ಸುಳ್ಳು ಕೇಸ್ ಹಾಕಿರುವುದನ್ನು ವಾಪಸ್ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಇದು ಆಗಿದೆ. ಆದ್ದರಿಂದ ಏನು ಆಯಿತೆಂಬ ವಿಚಾರವನ್ನು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ಈಗಾಗಲೇ ಸಂಬಂಧಪಟ್ಟರತಕ್ಕ ಮಾನ್ಯ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಇನ್ನು ಉಳಿದಿರತಕ್ಕದ್ದು, ಯಾರು ಈ ವಿಚಾರವನ್ನು ಬೆಳಕಿಗೆ ತರತಕ್ಕ ಪ್ರಯತ್ನ ಮಾಡಿದರು, ಪತ್ರಿಕಾ ಕ್ಷೇತ್ರದಲ್ಲಿರತಕ್ಕ ಮಿತ್ರರು ಅವರ ಮೇಲೆ ಕೆಲವು ಕೇಸ್ ಹಾಕತಕ್ಕ ಕೆಲಸ ನಡಿದಿದೆ ಎನ್ನತಕ್ಕ ವಿಚಾರವನ್ನು ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಕೆ.ಎಸ್. ಈಶ್ವರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರ ಏನು ಎನ್ನುವುದನ್ನು ನೋಡಿಸಬೇಕಾಗುತ್ತದೆ. ಆಮೇಲೆ ಕಾರ್ಯಕ್ರಮವನ್ನು ಹಾಕತಕ್ಕ ವಿಚಾರ. ಪತ್ರಿಕಾ ಮಿತ್ರರು ಅನೇಕ ಸಾರಿ ಪತ್ರಿಕೆಗಳಲ್ಲಿ ಸರಿಯಾಗಿ ಬರೆದಿದ್ದು ನಮಗೆ ಬಹಳ ಉಪಯೋಗ ಆಗಿದೆ. ಅದಕ್ಕಾಗಿ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅವರಿಂದ ಉಪಯೋಗ ಆಗಿದೆ, ಆಗಿಲ್ಲ ಎಂತಲ್ಲ. ಆದರೆ ವಿವರ ಏನು ಎನ್ನತಕ್ಕದ್ದು ನನಗೆ ಗೊತ್ತಿಲ್ಲ. ಏಕೆಂದರೆ ನಿನ್ನೆ ಮಾತನಾಡಬೇಕಾದರೆ ನಮ್ಮ ಆಫೀಸಿನಿಂದ ಏನೋ ಫೋನ್ ಹೋಯಿತು ಎಂದು ಯಾರೋ ಹೇಳಿದರು. ಕೊನೆಗೆ ತೆಗೆಸಿದರು ಎಂಬುದು ನನಗೆ ಈಗ ಗೊತ್ತಾಯಿತು. I don't know anything.

ಈ ವಿಷಯ ನನಗೆ ಗೊತ್ತಿರಲಿಲ್ಲ, ನಮ್ಮ ಆಫೀನಿಂದ ಫೋನ್ ಗೀನ್ ಹೋಗುವುದಿಲ್ಲ, ಆ ವಿಚಾರದ ಬಗ್ಗೆ ನಾನು ಬಹಳ ಬಿಗಿಯಾಗಿದ್ದೇನೆ. ಆದರ ಬಗ್ಗೆ ನಿಮಗೆ ಏನೂ ಅನುಮಾನ ಬೇಕಾಗಿಲ್ಲ. As far as this matter is concerned, certainly I will see that the matter is enquired into by the concerned authorities.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಕಾಪಿಯನ್ನು ಮುಖ್ಯಮಂತ್ರಿಗಳಿಗೆ ಕಳಿಸಿಕೊಡುತ್ತೇನೆ.

ಅಧ್ಯಕ್ಷರು : ಕಳಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಹತ್ತಿರ ಎಫ್‌ಐಆರ್ ಕಾಪಿ ಮತ್ತು ಇತರೇ ದಾಖಲಾತಿಗಳು ಇರಬೇಕಾದರೆ ಸಂಬಂಧಪಟ್ಟ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ. ನಿನ್ನೆ ನಿಲುವಳಿ ಸೂಚನೆ ಮೂಲಕ ಇದನ್ನು ಪ್ರಸ್ತಾಪ ಮಾಡಿದ್ದೇವೆ. ದಿಢೀರ್ ಎಂದು ಏನೂ ನಾವು ಪ್ರಸ್ತಾಪ ಮಾಡುತ್ತಿಲ್ಲ. ಸ್ವತಃ ಮುಖ್ಯ ಮಂತ್ರಿಗಳ ಕ್ಷೇತ್ರದಲ್ಲಿ ಈ ರೀತಿ ಯಾರು ಒಂಟಿ ಧ್ವನಿ ಪತ್ರಿಕೆಯ ರಾಮಚಂದ್ರಪ್ಪ ಮತ್ತು ಇತರರು, ಅವರ ಮೇಲೆ ಹಾಕಿರುವಂತಹ ಕೇಸ್ ಬಗ್ಗೆ ದಾಖಲಾತಿಗಳು ಇದೆ. ಇದರ ಬಗ್ಗೆ ಸರಿಯಾದ ಉತ್ತರ ತರಿಸಿ ತಾವು ಈ ಸದನಕ್ಕೆ ಕೊಡುವುದಿಲ್ಲ ಎನ್ನುವುದಾದರೆ ಯಾರಾದರೂ ಶಾಸಕರಾಗಲೀ, ಪತ್ರಕರ್ತರಾಗಲೀ ಈ ಅನ್ಯಾಯದ ವಿರುದ್ಧ ಇಂತಹ ಕಳ್ಳಸಾಗಾಣಿಕೆ ವಿರುದ್ಧ ಕೆಲಸ ಮಾಡುವುದಕ್ಕೆ ಸಾಧ್ಯ ಆಗುತ್ತದಾ? ಈ ಸರ್ಕಾರದಿಂದ ರಕ್ಷಣೆ ಸಿಗುತ್ತದೆ ಎಂದು ಇದರ ಬಗ್ಗೆ ಅನುಮಾನ ಪಡುವಂತಹ ಪ್ರಸ್ತಾಪ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಐದು ನಿಮಿಷದಲ್ಲಿ ಮಾಹಿತಿಯನ್ನು ತರಿಸಬೇಕಾಗಿತ್ತು. ಇದು ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ನಿಲುವಳಿ ಸೂಚನೆ ಮೂಲಕ ಇದನ್ನು ಪ್ರಸ್ತಾಪ ಮಾಡಿದ್ದೇವೆ. ಸ್ವತಃ ಎಸ್.ಪಿ. ಅವರು ಇಂಟರೆಸ್ಟ್ ತೆಗೆದುಕೊಂಡು ಅಪರಾಧವನ್ನು ಪತ್ತೆ ಹಚ್ಚುವಲ್ಲಿ ಸಹಕರಿಸಿದವರಿಗೆ ಅಲ್ಲಿ ಪತ್ರಕರ್ತರು ಯಾರು ಫೋಟೋ ತೆಗೆದುಕೊಳ್ಳುವುದಕ್ಕೆ ಹೋಗಿದ್ದಾರೆ. ಅವರಿಗೆ ರಕ್ಷಣೆ ಕೊಡುವುದರ ಬದಲು

ಅವರ ಮೇಲೆ ಕೇಸ್ ಹಾಕುವ ಮಟ್ಟಕ್ಕೆ ಸರ್ಕಾರ ಬಂದಿದೆ ಹಾಗೂ ಪೋಲೀಸರು ಬಂದಿದ್ದಾರೆ ಎಂದರೆ ಇದು ಪತ್ರಿಕಾ ರಂಗಕ್ಕೆ ಮಾಡಿದಂತಹ ಅವಮಾನ ಎಂದು ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ಹೇಳುತ್ತೇನೆ. ಜನರು ಸಹ ಸರ್ಕಾರದ ಈ ಒಂದು ನೀತಿಯನ್ನು ಸಹಿಸುವುದಿಲ್ಲ ಎಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಕೈವಾಡ ಇದರಲ್ಲಿದೆ ಎಂದು ನಾನು ಹೇಳುತ್ತಿಲ್ಲ. ಇನ್ನೊಬ್ಬರ ಕೈವಾಡ ಇದೆ ಎಂತಲ್ಲ. ಆದರೆ ಇದು ನಡೆದಿರುವುದಕ್ಕೆ ದಾಖಲಾತಿ ಕೊಡುತ್ತೇನೆ. ತಾವು ಹೇಳಿ, ಆ ರೀತಿ ಕೇಸ್ ಹಾಕಿರುವುದು ನಿಜಾನಾ? ಕೇಸ್ ಹಾಕಿದ್ದರೆ ಅದು ಅಕ್ಷಮ್ಯ ಅಪರಾಧ ಆಗುತ್ತದೆ. ಸಂಬಂಧಪಟ್ಟ ಪೋಲೀಸ್ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ. ಇಲ್ಲವೇ ಇದ್ದರೆ ಇದರ ಬಗ್ಗೆ ತನಿಖೆ ನೆಡಿಸಿ. ಪತ್ರಕರ್ತರ ಮೇಲೆ ಈ ರೀತಿ ಕೇಸ್ ಹಾಕಿದ್ದಾರೆ. ಕೂಡಲೇ ಅವರ ಮೇಲೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುವಂತಹದು ಇದ್ದರೆ ದಯಮಾಡಿ ತಿಳಿಸಿ. ಇದಕ್ಕೆ ಉತ್ತರ ಕೊಡುತ್ತೀರಿ ಎಂದು ನಾವು ನಿರೀಕ್ಷೆ ಮಾಡಿದ್ದೇವೆ. ಇದು ನಿಮ್ಮ ಕ್ಷೇತ್ರದಲ್ಲಿಯೇ ನಡೆದಿರುವಂತಹ ಘಟನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಶಿವಮೊಗ್ಗ ಜಿಲ್ಲೆಯ ಪತ್ರಕರ್ತರ ಸಂಘದವರು ನಿನ್ನೆ ಒಂದು ರೆಸಲ್ಯೂಷನ್ ಪಾಸ್ ಮಾಡಿದ್ದಾರೆ. ರಾಜ್ಯ ಪತ್ರಕರ್ತರ ಸಂಘಕ್ಕೂ ತಿಳಿಸಿದ್ದಾರೆ. ಮೊನ್ನೆ ಜಿಲ್ಲಾ ಪತ್ರಕರ್ತರ ಸಂಘದವರು ಒಂದು ರೆಸಲ್ಯೂಷನ್ ಮಾಡಿಕೊಂಡು ಇದರ ಬಗ್ಗೆ ತನಿಖೆ ನಡೆಸಬೇಕೆಂದು ಸರ್ಕಾರಕ್ಕೆ ತಿಳಿಸಿಕೊಟ್ಟಿದ್ದಾರೆ. ನಿನ್ನೆ ದಿನ ಶಿವಮೊಗ್ಗ ಜಿಲ್ಲೆಯ ಪತ್ರಕರ್ತರೆಲ್ಲ ಬೆಂಗಳೂರಿಗೆ ಬಂದು ಇಲ್ಲಿನ ಪದಾಧಿಕಾರಿಗಳನ್ನು ಕಂಡು ಮಾತನಾಡಿದ್ದಾರೆ. ಅವರೂ ಕೂಡ ಈ ರೀತಿ ಆಗಿಬಿಟ್ಟರೆ ನಾವು ಹೇಗೆ ಕೆಲಸ ಮಾಡುವುದು ಎಂಬ ವಿಷಯ ಹೇಳಿರುವುದು ಶಿವಮೊಗ್ಗ ಜಿಲ್ಲೆಯ ಎಲ್ಲ ಪತ್ರಿಕೆಗಳಲ್ಲೂ ವಿಷಯ ಬಂದಿದೆ. ನನ್ನ ಹತ್ತಿರ ಪತ್ರಿಕೆಗಳು ಇದೆ ಅದನ್ನು ಕಳಸಿಕೊಡುತ್ತೇನೆ. ಈ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯ ಪತ್ರಕರ್ತರಿಗೆ ಮತ್ತು ಇಡೀ ರಾಜ್ಯದ ಪತ್ರಕರ್ತರಿಗೆ ರಕ್ಷಣೆ ಕೊಡಬೇಕಾದ ಸರ್ಕಾರ ಈ ಸ್ಥಿತಿಗೆ ಬಂದರೆ ನಮಗೆ ಏನು ರಕ್ಷಣೆ ಎಂಬ ಭಯ ಬಂದಿದೆ. ಶಾಸಕನಾಗಿ ನಾನು ನಿಮ್ಮ ಗಮನಕ್ಕೆ ಇದನ್ನು ತರುತ್ತಿದ್ದೇನೆ. ಇದಕ್ಕೆ ತಮ್ಮ ಕಡೆಯಿಂದ ಏನು ಕ್ರಮ ತೆಗೆದುಕೊಳ್ಳುತ್ತೀರಾ ಅಂತ ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಇದರ ವಿವರಗಳನ್ನು ಸದಸ್ಯರು ಕೊಟ್ಟಿದ್ದಾರೆ. ಒಂಟಿ ಧ್ವನಿ ಅಂತ ಪತ್ರಿಕೆಯ ರಾಮಚಂದ್ರ ಅಂತ ಹೇಳಿದಿರಲ್ಲ, ಅವರು ನಮ್ಮ ಸೊರಬದವರೇ ಆಗಿದ್ದಾರೆ. ಆ ಪತ್ರಿಕೆ ಪ್ರಿಂಟಾಗುವುದಿಲ್ಲ, ದಯವಿಟ್ಟು ನೆನಪಿನಲ್ಲಿಟ್ಟುಕೊಳ್ಳಿ. ಏಕೆಂದರೆ ನನ್ನ ಕ್ಷೇತ್ರದ ವಿಚಾರ ಹೇಳಿದಿರಿ, ನನ್ನ ಕ್ಷೇತ್ರದ ಬಗ್ಗೆ ಮಾಹಿತಿ ನನಗೆ ಚೆನ್ನಾಗಿ ಗೊತ್ತಿರುತ್ತದೆ ಎಂದು ತಾವು ಒಪ್ಪುತ್ತೀರಿ ಎಂದು ನಾನು ಭಾವಿಸಿದ್ದೇನೆ. ಈ ಒಂಟಿ ಧ್ವನಿ ಪ್ರಿಂಟಾಗಿ ಎಷ್ಟೋ ವರ್ಷಗಳು ಕಳೆದುಹೋಗಿಬಿಟ್ಟಿದೆ. ಈಗ ಸುಮ್ಮನೆ ಒಂಟಿಧ್ವನಿ ಅಂದರೆ, ಒಂಟಿ ಅಂದ ಕಡೆಗೆ ಧ್ವನಿ ಒಂದು ಕಡೆಗೆ ಅದರೆ ಅವೆಲ್ಲ ಏನೂ ಉಪಯೋಗವಿಲ್ಲ. ಬೇರೆ ಮನೋಭೂಮಿ ಪತ್ರಿಕೆ ಶೆಟ್ಟರು ಅಂತ ಹೇಳಿದ್ದೀರಿ. ಅವರು ಸಾಗರದವರು ನನಗೆ ಗೊತ್ತು ಅವರು ನನ್ನ ಮಿತ್ರರು ಕೂಡ ಹೌದು. ಆ ಪತ್ರಿಕೆ ಅಚ್ಚಾಗುತ್ತದೆ, ವಿವರಗಳನ್ನು ಬರೆತೀರ್ತಾರೆ, ಅದು ಏನಿದೆ ಎಂದು ನೋಡಿಸಬೇಕಾಗುತ್ತದೆ. ಅದಕ್ಕಾಗಿ ನಾನು ಸರಿಯಾದ ರೀತಿಯಲ್ಲಿ ತನಿಖೆ ಮಾಡಿಸಿ ಸೂಕ್ತವಾದ ಕಾನೂನು

ಕ್ರಮ ತೆಗೆದುಕೊಳ್ಳುತ್ತೇವೆ, ನಿಮ್ಮ ಬಳಿ ಇರುವ ವಿವರಗಳನ್ನು ಸ್ವಲ್ಪ ದಯವಿಟ್ಟು ಕಳಿಸಿಕೊಡಿ.

ವಿಷಯ (iii) : ಶ್ರೀಮತಿ ಸುನೀತ ಹೆಗ್ಗಣ್ಣನವರಿಗೆ ಏಡ್ಸ್ ಕಲುಷಿತ ರಕ್ತವನ್ನು ಕೊಟ್ಟಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಿಪ್ಪಾಣಿ ಶಾಸಕರಾದ ಮಾನ್ಯ ಜೋತಿಯವರು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಸುನೀತಾ ವಸಂತ ಅನ್ನುವ ಹರಿಜನ ಹೆಣ್ಣುಮಗಳು ಮಹಾರಾಷ್ಟ್ರದ ಮೀರಜ್ ಸರ್ಕಾರಿ ಆಸ್ಪತ್ರೆಗೆ ಸೇರಿದ್ದಾಗ ಏಡ್ಸ್ ರೋಗ ಬಂದ ಬಗ್ಗೆ ಕಳೆದ ವರ್ಷ ಅವರು ಈ ಪ್ರಶ್ನೆ ಎತ್ತಿದ್ದರು, ಅದರ ನಂತರ ಈ ಒಂದು ವರ್ಷದಲ್ಲಾಗಿರುವ ಬೆಳವಣಿಗೆ ಅಂದರೆ ಅವರ ಗಂಡನಿಗೂ ಸಹ ಏಡ್ಸ್ ರೋಗ ಬಂದಿದೆ ಮತ್ತು ಅವರು ಸಾಯುವ ಸ್ಥಿತಿಯಲ್ಲಿ ಇದ್ದಾರೆ, ಆಕೆ ಗರ್ಭಣಿಯಾಗಿದ್ದಾಳಂತೆ ಆದ್ದರಿಂದ ಇದನ್ನು ನಮ್ಮ ಸರ್ಕಾರದಿಂದ ವಿಚಾರಣೆ ಮಾಡಬೇಕೆನ್ನುವುದು ಒಂದು ಎರಡನೆಯದು ಮುಖ್ಯ ಮಂತ್ರಿಗಳು ತಮ್ಮ ಪರಿಹಾರ ನಿಧಿಯಿಂದ ತತಕ್ಷಣ ಸ್ವಲ್ಪ ಹಣದ ಸಹಾಯ ಮಾಡಬೇಕು ಅಂತ ಅವರು ಕೇಳಿದ್ದಾರೆ. ಆರೋಗ್ಯ ಸಚಿವರು ಒಂದು ಹೇಳಿಕೆ ಕೊಡಬೇಕಾಗಿತ್ತು, ಆದರೆ ಹೇಳಿಕೆ ಬಂದಿಲ್ಲ. ಏಡ್ಸ್ ರೋಗದಿಂದ ಅವರಗಳು ಸಾಯುವ ಸ್ಥಿತಿಯನ್ನು ತಲುಪಿದ್ದಾರೆ. ಈ ಬಗ್ಗೆ ಆಕೆಗೆ ಮಹಾರಾಷ್ಟ್ರದ ಮೀರಜ್ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾಗಿ ತಪಾಸಣೆಯಾಗಿಲ್ಲ. ರೋಗ ಬಂದಿದ್ದು ಬ್ಲಡ್ ಟ್ರಾನ್ಸ್‌ಮಿಷನ್ ಮಾಡುವ ಸಂದರ್ಭದಲ್ಲಿ. ಇದನ್ನು ಸರ್ಕಾರದ ಗಮನಕ್ಕೆ ನಾವು ತಂದುಬಿಟ್ಟಿದ್ದೇವೆ, ಮಾನ್ಯ ಜೋಶಿಯವರು ಕೆಲಸದ ನಿಮಿತ್ತ ಅಧ್ಯಕ್ಷರ ಪರವಾನಿಗೆ ಪಡೆದು ಹೋಗಿದ್ದಾರೆ, ಆದ್ದರಿಂದ ಸ್ವಲ್ಪ ಹಣದ ಸಹಾಯವನ್ನು ತಾವು ಈ ರೋಗಕ್ಕೆ ತುತ್ತಾದವರಿಗೆ ಮಾಡಬೇಕು. ಈ ಬಗ್ಗೆ ಸರ್ಕಾರ ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ ಈ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಸುಭಾಷ್ ಎನ್. ಜೋಷಿಯವರು ದಿನಾಂಕ 5-7-90ರಂದು ಕರ್ನಾಟಕ ವಿಧಾನ ಮಂಡಲದಲ್ಲಿ ಈ ವಿಚಾರದ ಬಗ್ಗೆ ಪ್ರಸ್ತಾಪವನ್ನು ಮಾಡಿರುತ್ತಾರೆ. ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು ಅಂದಿನ ಮಾನ್ಯ ಆರೋಗ್ಯ ಸಚಿವೆಯರಾದ ಶ್ರೀಮತಿ, ಮನೋರಮಾ ಮದ್ವರಾಜ್ ರವರು ದಿನಾಂಕ 10-7-90ರಂದು ಮಹಾರಾಷ್ಟ್ರ ಸರ್ಕಾರದ ಮಾನ್ಯ ಆರೋಗ್ಯ ಸಚಿವರಿಗೆ ಪತ್ರ ಬರೆದು ಈ ಪ್ರಕರಣದ ಬಗ್ಗೆ ವಿವರಗಳನ್ನು ಕೋರಿದ್ದರು. ನಂತರ ದಿ.14-7-90ರಂದು ಮೀರಜ್‌ನ ವ್ಯಾಲೆಸ್ ಆಸ್ಪತ್ರೆಯ ನಿರ್ದೇಶಕರು ಈ ರಾಜ್ಯದ ಆರೋಗ್ಯ ನಿರ್ದೇಶಕರವರಿಗೆ ಪತ್ರ ಬರೆದು ಈ ಕೆಳಗಿನಂತೆ ವಿವರಗಳನ್ನು ನೀಡಿದ್ದಾರೆ.

ಶ್ರೀಮತಿ. ಸುನೀತ ಹೆಗ್ಗಣ್‌ನವರ ವಯಸ್ಸು 25, ಅಥಣಿ ತಾಲ್ಲೂಕು, ಬೆಳಗಾಂ ಜಿಲ್ಲೆ. ಇವರು ಹೃದಯ ರೋಗದಿಂದ ನರಳುತ್ತಿದ್ದು ಅವರಿಗೆ 11ನೇ ಜೂನ್ 1990ರಂದು ಹೃದ್ರೋಗ ಶಸ್ತ್ರ ಚಿಕಿತ್ಸೆ ಮಾಡಲಾಯಿತು. ಈ ಸಮಯದಲ್ಲಿ ಅವರಿಗೆ 3 ಬಾಟಲ್ ಬಿ ಪಾಸಿಟಿವ್ ರಕ್ತ ಕೊಡಲಾಯಿತು. ಈ ಬಾಟಲ್‌ಗಳಿಂದ ಕೊಟ್ಟಿದ್ದ ರಕ್ತ ಏಡ್ಸ್ ರೋಗದ ಪರೀಕ್ಷೆಗೆ ಒಳಪಡಿಸಿ ಅದು ನೆಗೆಟೀವ್